ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರ – 560 003
KARNATAKA SECONDARY EDUCATION EXAMINATION BOARD, MALLESWARAM, BENGALORE - 560 003

# ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆ – 2021

# S.S.L.C SUPPLEMENTARY EXAMINATION – 2021

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**ಉತ್ತರಗಳ ಸಂಕೇತ**

**Key Answers**

**ಸಂಕೇತ ಸಂಖ್ಯೆ : 01K** **Code No. : 01K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** **[Total No. of Questions : 40+40+40=120**

**ವಿಷಯ : ಕನ್ನಡ**

## Subject : Kannada

---

## ಪ್ರಥಮ ಭಾಷೆ ಕನ್ನಡ

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರದ ಕ್ರಮಾಕ್ಷರವನ್ನು ನಿಮಗೆ ನೀಡಿರುವ OMR ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಶಾಹಿಯ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ.** **[40 × 1 = 40]**

**1) ಸಾರಾ ಅಬೂಬಕ್ಕರ್ ಅವರ ಜನ್ಮಸ್ಥಳ**

A) ಕಾಸರಗೋಡು B) ಮೈಸೂರು

C) ಶಿವಮೊಗ್ಗ D) ಧಾರವಾಡ

ಉತ್ತರ : (A) ಕಾಸರಗೋಡು

**2) ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು**

A) ಭರತ B) ವಾಲಿ

C) ದನು D) ಶಬರ

ಉತ್ತರ : (C) ದನು

**3) ಇಂದಲ್ಲ ನಾಳೆ ಫಲ ಕೊಡುವುದು ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ________**

A) ಅಕ್ಷರ B) ಹಾಸ್ಯ

C) ಸಂತೋಷ D) ಕಾರುಣ್ಯ

ಉತ್ತರ : (A) ಅಕ್ಷರ

**4) ಹುಲಿಯನ್ನು ಎದುರಿಸಲು ಶಾನುಭೋಗರ ಬಳಿ ಇದ್ದ ಬ್ರಹ್ಮಾಸ್ತ್ರ**

A) ತೆಂಗಿನ ಗರಿಯ ಪಂಜು B) ಎತ್ತಿನ ಕೊರಳಿನ ಗಂಟೆ

C) ಕಾಲಿಗೆ ಎಡವಿದ ಕಲ್ಲು D) ಖಿರ್ದಿ ಪುಸ್ತಕ

ಉತ್ತರ : (D) ಖಿರ್ದಿ ಪುಸ್ತಕ

**5) ವಿಶ್ವೇಶ್ವರಯ್ಯನವರು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂದು ಹಂಬಲಿಸಿದವರು**

A) ವೆಂಕಟಲಕ್ಷ್ಮಮ್ಮ B) ಸಿ. ರಂಗಾಚಾರ್ಲು

C) ಜೇಮ್ಸ್ ಬರ್ಕ್ಲಿ D) ಶ್ರೀನಿವಾಸಶಾಸ್ತ್ರಿ

ಉತ್ತರ : (A) ವೆಂಕಟಲಕ್ಷ್ಮಮ್ಮ

**6) ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ತುದಿಗಾಲಲ್ಲಿ ನಿಂತು ಕಾಯುತ್ತಿದ್ದವರು**

A) ಮುದುಕಿ

B) ಮುದುಕಿಯ ಮಗಳು

C) ಮುದುಕಿಯ ಮಗ

D) ಮುದುಕಿಯ ಗಂಡ

ಉತ್ತರ : (C) ಮುದುಕಿಯ ಮಗ

**7) ಶ್ರೀರಾಮನ ತಂದೆಯ ಹೆಸರು**

A) ದ್ರುಪದ B) ಜನಕ

C) ಪಾಂಡು D) ದಶರಥ

ಉತ್ತರ : (D) ದಶರಥ

**8) ವಿಶ್ವೇಶ್ವರಯ್ಯನವರ ಹುಟ್ಟು ಹಬ್ಬದ ನೆನಪಿಗಾಗಿ ಇಂದಿಗೂ ಈ ದಿನಾಚರಣೆಯನ್ನು ಆಚರಿಸಲಾಗುವುದು**

A) ಎಂಜಿನಿಯರ್ಸ್ ದಿನಾಚರಣೆ
B) ಡಾಕ್ಟರ್ಸ್ ದಿನಾಚರಣೆ
C) ಶಿಕ್ಷಕರ ದಿನಾಚರಣೆ
D) ಮಕ್ಕಳ ದಿನಾಚರಣೆ

ಉತ್ತರ : (A) ಎಂಜಿನಿಯರ್ಸ್ ದಿನಾಚರಣೆ

**9) 'ಶಿವಾನುಭವ ಶಬ್ದಕೋಶ' ಪುಸ್ತಕವನ್ನು ಬರೆದವರು**

A) ದೇವನೂರ ಮಹಾದೇವ
B) ಹಳಕಟ್ಟಿ
C) ಪು.ತಿ.ನರಸಿಂಹಾಚಾರ್
D) ದುರ್ಗಸಿಂಹ

ಉತ್ತರ : (B) ಹಳಕಟ್ಟಿ

**10) ಎ.ಎನ್.ಮೂರ್ತಿರಾವ್ ಅವರ ಪೂರ್ಣ ಹೆಸರು**

A) ಮೂರ್ತಿರಾವ್ ನರಸಿಂಹ ಅಕ್ಕಿ ಹೆಬ್ಬಾಳು
B) ನರಸಿಂಹ ಅಕ್ಕಿ ಹೆಬ್ಬಾಳು ಮೂರ್ತಿರಾವ್
C) ಅಕ್ಕಿ ಹೆಬ್ಬಾಳು ಮೂರ್ತಿರಾವ್ ನರಸಿಂಹ
D) ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್

ಉತ್ತರ : (D) ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್

**11) ಧರ್ಮಾಧಿಕರಣರು ವಿಸ್ಮಯಗೊಂಡಿದ್ದು**

A) ವೃಕ್ಷ ಸಾಕ್ಷಿ ಹೇಳುತ್ತದೆ ಎಂದು ತಿಳಿದಾಗ
B) ಪ್ರೇಮಮತಿ ಸುಳ್ಳನ್ನು ಹೇಳಿದಾಗ
C) ನ್ಯಾಯ ತೀರ್ಮಾನಕ್ಕೆ ಸಮಯ ಮೀರುತ್ತಿದ್ದುದರಿಂದ
D) ಧರ್ಮಬುದ್ಧಿ ಸಾಕ್ಷಿಯನ್ನು ಒಪ್ಪಿಕೊಂಡಿದ್ದರಿಂದ

ಉತ್ತರ : (A) ವೃಕ್ಷ ಸಾಕ್ಷಿ ಹೇಳುತ್ತದೆ ಎಂದು ತಿಳಿದಾಗ

**12) ವೃಕ್ಷ ಸಾಕ್ಷಿ ಗದ್ಯ ಪಾಠದಿಂದ ತಿಳಿದು ಬರುವ ನೀತಿ**

A) ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ
B) ಕೈ ಕೆಸರಾದರೆ ಬಾಯಿ ಮೊಸರು
C) ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ
D) ಓದು ಒಕ್ಕಾಲು ಬುದ್ಧಿ ಮುಕ್ಕಾಲು

ಉತ್ತರ : (A) ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

**13) ಕಲುಷಿತವಾದೀ ನದೀಜಲಗಳಿಗೆ ಮುಂಗಾರಿನ ________**

A) ಹಣತೆಯ ಹಚ್ಚೋಣ
B) ಕನಸನು ಬಿತ್ತೋಣ
C) ಮಳೆಯಾಗೋಣ
D) ಬೆಳೆಯಾಗೋಣ

ಉತ್ತರ : (C) ಮಳೆಯಾಗೋಣ

**14) 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದಲ್ಲಿ ಹಕ್ಕಿ ಹರಸಿದ್ದು**

A) ಸಾರ್ವಭೌಮರನ್ನು
B) ಹೊಸಗಾಲದ ಹಸುಮಕ್ಕಳನ್ನು
C) ಮಂಗಳ ಲೋಕದ ಅಂಗಳಕೇರಿದವರನ್ನು
D) ಸೂರ್ಯ–ಚಂದ್ರರನ್ನು

ಉತ್ತರ : (B) ಹೊಸಗಾಲದ ಹಸುಮಕ್ಕಳನ್ನು

**15) ಕುಂಪಣಿ ಸರಕಾರ ಜಾರಿಗೆ ತಂದ ಶಾಸನ**

A) ಕಬುಲಶಾಸನ
B) ಕುರ್ತುಕೋಟಿಶಾಸನ
C) ಯುದ್ಧಶಾಸನ
D) ನಿಶ್ಯಸ್ತ್ರೀಕರಣ

ಉತ್ತರ : (D) ನಿಶ್ಯಸ್ತ್ರೀಕರಣ

**16) ಕೃಷ್ಣನು ಮೈದುನತನದ ಸರಸವನೆಸಗಿ ರಥದಲಿ ಕೂರಿಸಿ ಕೊಂಡಿದ್ದು ಇವನನ್ನು**

A) ಕರ್ಣ
B) ಯುಧಿಷ್ಠಿರ
C) ದುರ್ಯೋಧನ
D) ಭೀಮ

ಉತ್ತರ : (A) ಕರ್ಣ

**17) ಕವಿಗೆ ಹುಲ್ಲಿನ ಹಾಸು ಈ ರೀತಿ ಕಂಡಿದೆ**

A) ಹೊಸಪಚ್ಚೆಯ ಜಮಖಾನೆಯಂತೆ
B) ಹಸುರಿನ ಕಣಿವೆಯಂತೆ
C) ಹಕ್ಕಿಯ ಕೊರಲಿಂಪಿನಂತೆ
D) ಸಂಜೆಯ ಹಸುರು ಬಿಸಿಲಿನಂತೆ

ಉತ್ತರ : (A) ಹೊಸಪಚ್ಚೆಯ ಜಮಖಾನೆಯಂತೆ

**18) ಅಂತಕಾತ್ಮಜ ಎಂದರೆ ಇವನು**

A) ಭೀಮ
B) ಅರ್ಜುನ
C) ಕರ್ಣ
D) ಯುಧಿಷ್ಠಿರ

ಉತ್ತರ : (D) ಯುಧಿಷ್ಠಿರ

**19) ರಾಮನ ಕುದುರೆಯನ್ನು ಲವನು ಇದರಿಂದ ಕಟ್ಟಿದನು**

A) ಉತ್ತರೀಯದಿಂದ　B) ಹಗ್ಗದಿಂದ

C) ಸರಪಳಿಯಿಂದ　D) ಬಾಳೆಯ ನಾರಿನಿಂದ

ಉತ್ತರ : (A) ಉತ್ತರೀಯದಿಂದ

**20) ಕವಿ ಜಿ.ಎಸ್.ಶಿವರುದ್ರಪ್ಪನವರು ಭಯ-ಸಂಶಯದೊಳು ಕಂದಿದ ಕಣ್ಣೊಳು ಬಿತ್ತೋಣವೆಂದಿರುವುದು**

A) ಹೊಸ ಭರವಸೆಗಳನ್ನು　B) ನಾಳಿನ ಕನಸನ್ನು

C) ಪ್ರೀತಿಯ ಹಣತೆಯನ್ನು　D) ಮುಂಗಾರಿನ ಮಳೆಯನ್ನು

ಉತ್ತರ : (B) ನಾಳಿನ ಕನಸನ್ನು

**21) ದ.ರಾ.ಬೇಂದ್ರೆಯವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವನ ಸಂಕಲನ**

A) ಸಖೀಗೀತ　B) ನಾದಲೀಲೆ

C) ನಾಕುತಂತಿ　D) ಅರಳು-ಮರಳು

ಉತ್ತರ : (C) ನಾಕುತಂತಿ

**22) 'ಹಲಗಲಿಯ ಬಂಟರ ಹತಾರ ಕದನ' ವೀರರಸ ಪ್ರಧಾನವಾದ**

A) ಕತೆ　B) ಗಾದೆ

C) ಒಗಟು　D) ಲಾವಣಿ

ಉತ್ತರ : (D) ಲಾವಣಿ

**23) ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು**

A) ನಕುಲ–ಸಹದೇವರು　B) ಭೀಮ

C) ಅರ್ಜುನ　D) ಕರ್ಣ

ಉತ್ತರ : (A) ನಕುಲ–ಸಹದೇವರು

**24) 'ಹಸುರು' ಪದ್ಯದಲ್ಲಿ ಕವಿಗೆ ಬನದ ಅಂಚಿನಲಿ ಕಂಡದ್ದು**

A) ಗದ್ದೆಯ ಬಯಲು　B) ಹಸುರಿನ ಮಲೆ

C) ಕೊನೆವೆತ್ತ ಅಡಕೆಯ ತೋಟ　D) ಹಸುರಿನ ಕಣಿವೆ

ಉತ್ತರ : (C) ಕೊನೆವೆತ್ತ ಅಡಕೆಯ ತೋಟ

**25) ನೆಲಕಿಜಿವೆನೆಂದು ಬಗೆದಿರೆ ಚಲಕಿಜಿವೆಂ ಎಂದು ಹೇಳಿದವರು**

A) ಭೀಷ್ಮ
B) ದುರ್ಯೋಧನ
C) ಅರ್ಜುನ
D) ಭೀಮ

ಉತ್ತರ : (B) ದುರ್ಯೋಧನ

**26) ಮುನಿಸುತರು ಹೆದರಲು ಕಾರಣ**

A) ಕುದುರೆ ಆಶ್ರಮವನ್ನು ಪ್ರವೇಶಿಸಿದ್ದರಿಂದ
B) ಲವನು ಕುದುರೆಯನ್ನು ಕಟ್ಟಿದ್ದರಿಂದ
C) ಕುದುರೆಯ ಬೆಂಗಾವಲಿಗೆ ಶತ್ರುಘ್ನ ಬಂದುದರಿಂದ
D) ಲವನು ಉದ್ಯಾನವನವನ್ನು ಆರೈಕೆ ಮಾಡುತ್ತಿದ್ದುರಿಂದ

ಉತ್ತರ : (B) ಲವನು ಕುದುರೆಯನ್ನು ಕಟ್ಟಿದ್ದರಿಂದ

**27) ಸರ್ವಧರ್ಮ ಸಮ್ಮೇಳನವು ನಡೆದ ಸ್ಥಳ**

A) ಚಿಕಾಗೊ
B) ನ್ಯೂಯಾರ್ಕ್
C) ಬೋಸ್ಟನ್
D) ಅಟ್ಲಾಂಟಾ

ಉತ್ತರ : (A) ಚಿಕಾಗೊ

**28) ಮೂಕ ವಿಸ್ಮಿತಳಾದ ಪುಟ್ಟಿ ಥಳಥಳಿಸುವ ಬಾಲ ರವಿಯನ್ನು ಕಂಡಿದ್ದು**

A) ಹಾಡುವ ಕೋಗಿಲೆಯಲಿ
B) ಹೊಳೆವ ರಂಗೋಲಿಯಲಿ
C) ಒಡೆಯನ ಅಂಗಳದಲಿ
D) ತೂತು ಬಿದ್ದ ಸೀರೆಯಲಿ

ಉತ್ತರ : (B) ಹೊಳೆವ ರಂಗೋಲಿಯಲಿ

**29) ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದದ್ದು**

A) ಏಪ್ರಿಲ್ 13, 1919 ರಲ್ಲಿ
B) ಏಪ್ರಿಲ್ 15, 1918 ರಲ್ಲಿ
C) ಮಾರ್ಚ್ 30, 1917 ರಲ್ಲಿ
D) ಮೇ 20, 1919 ರಲ್ಲಿ

ಉತ್ತರ : (A) ಏಪ್ರಿಲ್ 13, 1919 ರಲ್ಲಿ

**30) 'ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು ನೀರು ತಾಕಿದರೆ ಮಟಮಾಯ'. ಈ ಒಗಟಿನ ಉತ್ತರ**

A) ಉತ್ತರಾಣಿ ಗಿಡ
B) ಉಪ್ಪು
C) ಕಮಲ
D) ಮೀನು

ಉತ್ತರ : (B) ಉಪ್ಪು

**31) ಗುಣ ಸಂಧಿಗೆ ಉದಾಹರಣೆಯಾದ ಪದ**

A) ಸನ್ಮಾನ
B) ಅಷ್ಟೈಶ್ವರ್ಯ
C) ಮಹರ್ಷಿ
D) ಮಹಾತ್ಮ

ಉತ್ತರ : (C) ಮಹರ್ಷಿ

**32) 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

A) ತತ್ಪುರುಷ
B) ಕರ್ಮಧಾರಯ
C) ದ್ವಿಗು
D) ದ್ವಂದ್ವ

ಉತ್ತರ : (A) ತತ್ಪುರುಷ

**33) ಹಳೆಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ**

A) ಮ್
B) ಅಂ
C) ಅತ್ತಣಿಂ
D) ಒಳ್

ಉತ್ತರ : (D) ಒಳ್

**34) ಆಳಾಗ ಬಲ್ಲವನು _ ಈ ಗಾದೆಯ ಮುಂದಿನ ಭಾಗ**

A) ದುಡಿಯಬಲ್ಲನು
B) ಮಂತ್ರಿಯಾಗಬಲ್ಲನು
C) ಒಕ್ಕಲಿಗನಾಗಬಲ್ಲನು
D) ಅರಸಾಗಬಲ್ಲನು

ಉತ್ತರ : (D) ಅರಸಾಗಬಲ್ಲನು

**35) ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ಹೀಗೆನ್ನುವರು**

A) ಸಾಮಾನ್ಯಾರ್ಥಕಾವ್ಯಯಗಳು
B) ಭಾವಸೂಚಕಾವ್ಯಯಗಳು
C) ಅನುಕರಣಾವ್ಯಯಗಳು
D) ಕ್ರಿಯಾರ್ಥಕಾವ್ಯಯಗಳು

ಉತ್ತರ : (C) ಅನುಕರಣಾವ್ಯಯಗಳು

**36)** **ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸಬೇಕಾದ ಲೇಖನ ಚಿಹ್ನೆ**

A) ವಿವರಣಾತ್ಮಕ B) ಉದ್ಧರಣ

C) ವಾಕ್ಯವೇಷ್ಠನ D) ಅಲ್ಪವಿರಾಮ

ಉತ್ತರ : (B) ಉದ್ಧರಣ

**37)** **ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು**

A) ಉಪಮಾಲಂಕಾರ B) ರೂಪಕಾಲಂಕಾರ

C) ದೃಷ್ಟಾಂತಾಲಂಕಾರ D) ಉತ್ಪ್ರೇಕ್ಷಾಲಂಕಾರ

ಉತ್ತರ : (B) ರೂಪಕಾಲಂಕಾರ

**38)** **'ಚಂಚಲ' ಪದದಲ್ಲಿ ಕಂಡು ಬರುವ ಅಕ್ಷರ ಗಣ**

A) ಭ ಗಣ B) ಯ ಗಣ

C) ತ ಗಣ D) ಜ ಗಣ

ಉತ್ತರ : (A) ಭ ಗಣ

**39)** **'ವೈಶಾಖ' ಪದದ ತದ್ಭವ ರೂಪ**

A) ಬೇಸಗೆ B) ವರುಸ

C) ಬೆಸುಗೆ D) ಜೂಜು

ಉತ್ತರ : (A) ಬೇಸಗೆ

**40)** **ವಿದ್ಯಾರ್ಥಿಯು ತನ್ನ ಗುರುಗಳಿಗೆ ಪತ್ರ ಬರೆಯುವಾಗ ಮುಕ್ತಾಯ ಹೀಗಿರಬೇಕು**

A) ವಿಧೇಯ ವಿದ್ಯಾರ್ಥಿ B) ಮಾನ್ಯರೇ

C) ಶುಭಾಶಯಗಳು D) ಪೂಜ್ಯ ಗುರುಗಳೇ

ಉತ್ತರ : (A) ವಿಧೇಯ ವಿದ್ಯಾರ್ಥಿ

⌘⌘⌘